ದಾವಣಗೆರೆಯಲ್ಲಿ ಕ್ರೀಡಾಂಗಣವನ್ನು ನಿರ್ಮಿಸುವುದು.

೨೩೬. ಶ್ರೀ ಪಂಪಾಪತಿ (ದಾವಣಗೆರೆ) .--ಈ ಕೆಳ ಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ವಾರ್ತಾ ಯುವಜನ ಸೇವೆ ಕ್ರೀಡೆ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ದಾವಣಗೆರೆ ನಗರದಲ್ಲಿ ಕ್ರೀಡಾಂಗಣ ಕಟ್ಟಲು ೫ ಲಕ್ಷ ರೂಪಾಯಿ ಮಂಜೂರು ಮಾಡಲಾಗಿದ್ದು ಎಂದು ಆಶ್ವಾಸನೆ ಕೊಟ್ಟಿರುವುದು ಸರ್ಕಾರದವರ ಗಮನದಲ್ಲಿದೆಯೆ ?

(ಆ) ಹಾಗಿದ್ದಲ್ಲಿ ಈ ಬಗ್ಗೆ ಆಯವ್ಯಯದಲ್ಲಿ ಒದಗಿಸಲಾಗಿರುವ ಹಣದ ವಿವರವೆಷ್ಟು ?

ಶ್ರೀ ಜೀವರಾಜ ಆಳ್ವ.--(ವಾರ್ತಾ ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯ ಸಚಿವರು)

(ಅ) ಗಮನದಲ್ಲಿದೆ.

(ಆ) ಆಯವ್ಯಯದಲ್ಲಿ ೩೦ ಲಕ್ಷ ರೂಪಾಯಿಗಳನ್ನು ಜಿಲ್ಲಾ ಕ್ರೀಡಾಂಗಣಗಳನ್ನು ಕಟ್ಟುವುದ ಕ್ಕೋಸ್ಕರ ಒದಗಿಸಲಾಗಿದೆ. ಈ ಹಣದಲ್ಲಿ ತಾಲ್ಲೂಕು ಕ್ರೀಡಾಂಗಣಗಳಿಗೂ ಉಪಯೋಗಿಸಲಾಗುವುದು.

ಶ್ರೀ ಯು. ಭೂಪತಿ (ಶ್ರೀ ಪಂಪಾಪತಿಯವರ ಪರವಾಗಿ).--ಅಧ್ಯಕ್ಷರೇ, ಈ ಕ್ರೀಡಾಂಗಣವನ್ನು ಪೂರ್ತಿ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿದರೆ ಚೆನ್ನಾಗಿರುತ್ತದೆ. ಆಂತರ್‌ರಾಷ್ಟ್ರೀಯ ಯಂವ ವರ್ಷದಲ್ಲಿ ಇದನ್ನು ಪೂರ್ತಿಗೊಳಿಸುತ್ತೇವೆಂದು ಹೇಳಲಾಗಿತ್ತು. ಇನ್ನು ಎಷ್ಟು ಅವಧಿಯಲ್ಲಿ ಇದನ್ನು ಪೂರ್ಣ ಮಾಡುತ್ತೀರಿ ?

ಶ್ರೀ. ಜೀವರಾಜ ಆಳ್ವ.--ಈ ಹಣಕಾಸಿನ ವರ್ಷದಲ್ಲಿಯೇ ಕ್ರೀಡಾಂಗಣ ಪೂರ್ಣಗೊಳ್ಳುವ ಆಸೆಯನ್ನು ಸರ್ಕಾರ ಇಟ್ಟುಕೊಂಡಿದೆ. ಈ ಕ್ರೀಡಾಂಗಣವನ್ನು ಕಟ್ಟುವ ಸಲುವಾಗಿಯೇ ಅದಕ್ಕೆ ಜೋಕಾಗಿರುವ ಧನ ಸಹಾಯದ ಬಗ್ಗೆ ಅಂದಾಜು ಹಾಗೂ ನಕ್ಷೆಯನ್ನು ಕಳುಹಿಸಿಕೊಡಬೇಕೆಂದು ದಾವಣಗೆರೆಯ ನಗರಸಭೆಯ ಕಮಿಷನರ್ ಅವರಿಗೆ ಕೇಳಿದ್ದೇವೆ. ಆ ಬಗ್ಗೆ ಜ್ಞಾಪನಾಪತ್ರವನ್ನೂ ಕೂಡಾ ಕಳುಹಿಸಿದ್ದೇವೆ. ಆದರೆ ಅವರಿಂದ ಇಲ್ಲಿಯವರೆಗೆ ನಕಾಸೆ ಮತ್ತು ಅಂದಾಜು ವೆಚ್ಚದ ಬಗ್ಗೆ ಉತ್ತರ ಬಂದಿರುವುದಿಲ್ಲ.

ಅಫ್‌ಜಲ್‌ಪುರ ತಾಲ್ಲೂಕಿನಲ್ಲಿ ಪ್ರಾಥಮಿಕ ಆರೋಗ್ಯ ಘಟಕದ ನಿರ್ಮಾಣ

೫೪೬. ಶ್ರೀ ಮಾಲಿಕಯ್ಯ ಗುತ್ತೇದಾರ್ (ಅಫಜಲ್‌ಪುರ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ, ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಅಫಜಲ್‌ಪುರ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಘಟಕದ ಕಟ್ಟಡದ ನಿರ್ಮಾಣದ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

(ಆ) ಪ್ರಾಥಮಿಕ ಆರೋಗ್ಯ ಘಟಕಕ್ಕೆ ಖಾಸಗಿಯವರು ೨೫,೦೦೦ ರೂಪಾಯಿ ಗೇಣಿಗೆ ನೀಡಿ ೪ ಎಕರೆ ಜಮೀನು ನೀಡಿದ್ದರೂ ೧೦ ವರ್ಷಗಳಿಂದ ಸರ್ಕಾರದವರು ಈ ಬಗ್ಗೆ ಯಾವ ಕ್ರಮ ಕೈಗೊಳ್ಳದೇ ಇರುವುದಕ್ಕೆ ಕಾರಣವೇನು ?

(ಇ) ಈ ಕಟ್ಟಡದ ನಿರ್ಮಾಣದ ಬಗ್ಗೆ ಸರ್ಕಾರದವರು ಈಗಲಾದರೂ ತೀವ್ರ ಕ್ರಮಗಳನ್ನು ಕೈಗೊಳ್ಳುವರೆ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ ಮಂತ್ರಿಗಳು.—

(ಅ) (ಆ) (ಇ) ಸರ್ಕಾರದ ಆಜ್ಞೆ ಸಂಖ್ಯೆ ಎಚ್‌ಎಂಎ ೨೦೬ ಪಿಪಿಎನ್ ೭೫, ತಾ|| ೧೫-೧೯೭೬ರಲ್ಲಿ ಅಫಜಲ್‌ಪುರ ತಾಲ್ಲೂಕು ಸ್ಟೇಷನ್ ಗಾಣಗಾಪುರಕ್ಕೆ ಪ್ರಾಥಮಿಕ ಆರೋಗ್ಯ ಘಟಕವನ್ನು ಆಲ್ಲಿಯಂ ಸ್ಥಳೀಯ ಜನರು ಗ್ರಾಮ ಪಂಚಾಯಿತಿ ತಾಲ್ಲೂಕಿನ ಅಭಿವೃದ್ಧಿ ಮಂಡಲಿಯವರು ಸ್ವಂತ ಹಣದಿಂದ